**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ.804/2020

ಸಿ.ಡಬ್ಲೂಃ 5 ಪಿ.ಡಬ್ಲೂಃ 5

ಹೆಸರುಃ ವೀರುಪಾಕ್ಷಪ್ಪ ಶಿರೋಳ
ತಂದೆಯ ಹೆಸರುಃ ಶರಣಪ್ಪ
ವಯಸ್ಸುಃ 68 ವರ್ಷ
ಉದ್ಯೋಗಃ ಒಕ್ಕಲುತನ
ವಿಳಾಸಃ ರೋಣ.

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ **29-09-2023** ರಂದು **ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

**1.** ದಿಃ16-05-2020 ರಂದು ಆಸ್ತಿ ಸಲುವಾಗಿ ಪ್ರಶಾಂತ ಜಕ್ಕನಗೌಡ್ರ ಹಾಗೂ ಅವರ ಅಣ್ಣ ವಿನಾಯಕ ಜಕ್ಕನಗೌಡ್ರ ಪಾಲು ವಿಭಾಗದಸಲುವಾಗಿ ಹೊಡೆದಾಡುತ್ತಿದ್ದರು. ಆಗ ವೇಳೆ ಸಂಜೆ 4.30 ರಿಂದ 5.00 ಆಗಿತ್ತು. ಆಸ್ತಿಯಲ್ಲಿ ಹೆಚ್ಚು ಕಡಿಮೆ ಆಗಿದೆಂದು ಗುದ್ದಾಡುತ್ತಿದ್ದರು. ಆಗ ಹಿರಿಯರಾದ ನಾನು ಮತ್ತು ಶೇಖರಗೌಡ, ಶಿವನಗೌಡ ಹಾಗೂ ಇನ್ನೂ 3-4 ಜನರು ಸೇರಿ ಪಾಲುವಾಟ್ನಿ ಸಂಬಂಧ ಪಂಚಾಯತಿ ಮಾಡುತ್ತಿದ್ದಾಗ ಪ್ರಶಾಂತ ಜಕ್ಕನಗೌಡರ ತನಗೆ ಪಾಲು ಸರಿಯಾಗಿ ಬಂದಿಲ್ಲವೆಂದು ಕಟ್ಟಿಗೆಯನ್ನು ತೆಗೆದುಕೊಂಡು ವಿನಾಯಕನಿಗೆ ಹೊಡೆಯಲು ಹೋದ. ಶಿವನಗೌಡ ಅಲ್ಲೇ ಇದ್ದರು. ಅಲ್ಲಿ ತೆಕ್ಕೆ ಬಿದ್ದರು. ನಾವು ಬಿಡಿಸಲು ಹೋದೆವು. ಆಗ ಪ್ರಶಾಂತ ಶಿವನಗೌಡ ಮತ್ತು ವಿನಾಯಕನಿಗೆ ಇತನು ಅವಾಚ್ಯ ಶಬ್ದಗಳಿಂದ ಹಡಿಸಿಮಗನೆ ಎಂದು ಬೈದನು. ಪ್ರಶಾಂತ ಅಂಗಿ ಹಿಡಿದುಕೊಂಡು ತೆಕ್ಕೆ ಬಿದ್ದನು. ನಾವು ಬಿಡಿಸಲು ಬಂದರು ನಮ್ಮ ಮಾತನ್ನು ಕೇಳಲಿಲ್ಲ. ಆಗ ನಾವು ನಮ್ಮ ಮನೆ ಕಡೆ ಹೋದೆವು. ಪ್ರಶಾಂತ ಕಟ್ಟಿಗೆಯನ್ನು ಹಿಡಿದುಕೊಂಡಿದ್ದನ್ನು ಕಸಿದು ಒಗೆದೆವು. ಪ್ರಶಾಂತ ವಿನಾಯಕನ ಅಂಗಿ ಹಿಡಿದುಕೊಂಡಿದ್ದನು. ಆ ಕಟ್ಟಿಗೆಯನ್ನು ನಾನು ಕಸಿದು ಒಗೆದೆನು. ಅವರು ಜಗಳ ಮಾಡುತ್ತಿದ್ದರು. ನಾನು ಮನೆ ಕಡೆ ಹೋದೆ. ಮಾರನೇ ದಿನ ಪೋಲೀಸರು ನಮ್ಮನ್ನುಕರೆದು ವಿಚಾರ ಮಾಡಿದರು. ಆ ದಿನ ಪ್ರಶಾಂತ ಇತನು ತನ್ನ ಕೈಯಲ್ಲಿ ಹಿಡಿದುಕೊಂಡ ಬಡಿಗೆಯನ್ನು ಸಾಕ್ಷಿ ನೋಡಿ ಇದೇ ಬಡಿಗೆ ಎಂದು ಹೇಳಿರುತ್ತಾರೆ. ಸದರಿ ಬಡಿಗೆ ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಆರೋಪಿ ಪರ ವಕೀಲರು ಗೈರು ಹಾಜರ ಆಗಿದ್ದು, ಅವರ ಪರ ಮತ್ತೊಬ್ಬ ವಕೀಲರು ಸಮಯ ಕೇಳಿದ್ದು ಸಾಕ್ಷಿಯು ಹಿರಿಯ ನಾಗರಿಕರಾಗಿದ್ದು, ಸಮಯ ನೀಡಲು ಯಾವುದೇ ಸಕಾರಣಗಳು ಇಲ್ಲವಾದ್ದರಿಂದ ಆದ್ದರಿಂದ ಅವರ ಪಾಟೀ ಸವಾಲು ಇಲ್ಲವೆಂದು ತೆಗೆದುಕ್ಕೊಳಲಾಯಿತು.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

sd/-

**(ಆದಿತ್ಯ ಆರ್ ಕಲಾಲ್ )**
ಹೆಚ್ಚುವರಿ ಸಿವಿಲ್ ಹಾಗೂ
ಜೆ.ಎಮ್.ಎಫ್.ಸಿ ನ್ಯಾಯಾಧೀಶರು
ರೋಣ.